

# ನಕ್ಕುಬಿಡಿ..!



ಒಂದು ಪ್ರಖ್ಯಾತ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಪ್ರತಿನಿತ್ಯ ಬೆಳಗಿನ ಹನ್ನೊಂದು ಘಂಟೆಗೆ ಸರಿಯಾಗಿ ಒಂದು ಸಾವು ಸಂಭವಿಸುತ್ತಿತ್ತು. 'ಇದೆಂಥಾ ವಿಚಿತ್ರ' ಎಂದು ಎಲ್ಲರೂ ಆಶ್ಚರ್ಯ ಪಡುತ್ತಿದ್ದರು. ಈ ಸಮಸ್ಯೆಗೆ ಕಾರಣವೇನೆಂದು ಯಾರಿಗೂ ತಿಳಿಯಲಿಲ್ಲ. ಆಸ್ಪತ್ರೆಯ ವೈದ್ಯರು, ದಾದಿಯರು ಮತ್ತಿತರ ಸಿಬ್ಬಂದಿ 'ಇದು ಯಾವುದೋ ದುಷ್ಟಶಕ್ತಿಯ ಕಾಟ' ಎಂದುಕೊಂಡರೂ, ಪ್ರತ್ಯಕ್ಷವಾಗಿ ನೋಡಲೇಬೇಕೆಂದು ಒಂದು ದಿನ ಹನ್ನೊಂದು ಘಂಟೆಗೆ ಆ ವಾರ್ಡಿನ ಹೊರಗೆ ಕಾಯುತ್ತಾ ಕುಳಿತರು.

ಸರಿಯಾಗಿ ಹನ್ನೊಂದು ಘಂಟೆ. ತಾತ್ಕಾಲಿಕವಾಗಿ ನೇಮಕವಾಗಿದ್ದ ಸ್ವಚ್ಛತಾ ನಿರ್ವಹಣೆಯ ಸಿಬ್ಬಂದಿಯೊಬ್ಬ ಒಳಹೋದ. ಪ್ಲಗ್ಗೊಂದನ್ನು ಕಿತ್ತು ವ್ಯಾಕ್ಯೂಮ್ ಕ್ಲೀನರ್ ಕನೆಕ್ಟ್ ಮಾಡಿದ. ತನ್ನ ಕೆಲಸ ಶುರು ಮಾಡಿದ.

ಅವನು ಕಿತ್ತದ್ದು ರೋಗಿಯ ಜೀವ ಉಳಿಸುವ ಸಾಧನದ ವೈರ್!




ಹೆಂಡತಿ: ನಿನ್ನೆ ರಾತ್ರಿ ನೀವೊಂದು ನೆಕ್ಲೇಸ್ ಕೊಡಿಸಿದಂತೆ ಕನಸು ಬಿತ್ತು. ಅದರ ಅರ್ಥ ಏನಿರಬಹುದು?

ಗಂಡ: ಇವತ್ತು ಸಂಜೆ ನಿಂಗೆ ಗೊತ್ತಾಗುತ್ತೆ.

ಹೆಂಡತಿ ಖುಷಿಯಿಂದ ಕಾದು ಕುಳಿತಳು. ಸಂಜೆ ಗಂಡ ಮನೆಗೆ ಬಂದಾಗ ಹೆಂಡತಿಗೆ ಗಿಫ್ಟ್ ಪ್ಯಾಕೆಟೊಂದನ್ನು ಕೊಟ್ಟ. ಕುತೂಹಲದಿಂದ ಅದನ್ನು ಬಿಚ್ಚಿ ನೋಡಿದರೆ 'ಕನಸುಗಳನ್ನು ಅರ್ಥ ಮಾಡಿಕೊಳ್ಳುವುದು ಹೇಗೆ?' ಎಂಬ ಪುಸ್ತಕವಿತ್ತು!

★★★

ಹೆಂಡತಿ; ಪ್ರಿಯಕರ, ನೀವು ನನ್ನನ್ನು ಎಷ್ಟು ಪ್ರೀತಿಸ್ತೀರಿ?

ಗಂಡ: ಶಾಹಜಹಾನ್ ಮುಮ್ತಾಜಳನ್ನು ಪ್ರೀತಿಸಿದಷ್ಟು.

ಹೆಂಡತಿ: ಹಾಗಾದ್ರೆ ನೀವು ನಂಗೋಸ್ಕರ ತಾಜಮಹಲ್ ಕಟ್ಟಿಸ್ತೀರಾ?

ಗಂಡ: ಖಂಡಿತ. ನಾನು ಈಗಾಗ್ಲೆ ಜಾಗ ಖರೀದಿಸಿ ಇಟ್ಟಿದ್ದೇನೆ. ಆದ್ರೆ ತಡವಾಗ್ತಿರೋದು ನಿನ್ನಿಂದಲೇ!

★★★

---

ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಗುಂಡ ಕೋಪದಿಂದ ಪೈಲೆಟ್‌ನ ಹೆಡ್‌ಫೋನ್ ಕಿತ್ತುಕೊಂಡ.

ಪೈಲೆಟ್: ಕೋಪದಿಂದ, ಹೇ! ಏನು ಮಾಡುತ್ತಿದ್ದೀಯಾ?

ಗುಂಡ: ಮೊದಲು, ವಿಮಾನ ಡ್ರೈವ್ ಮಾಡು. ಆಮೇಲೆ ಹಾಡು ಕೇಳುವೆಯಂತೆ.!

★★★

ಬಾಸ್: ಯಾಕೋ ಚಿಕ್ಕ, ದಿನಾಲು ಆಫೀಸ್‌ಗೆ ಲೇಟು?

ಚಿಕ್ಕ: ಏನು ಮಾಡೋದು ಸಾ! ದಿನಾ ಹೆಂಡತಿಗೆ ಟಿಫನ್ ಮಾಡಿಕೊಟ್ಟು ಆಫೀಸ್‌ಗೆ ಬಿಟ್ಟು ಬರಬೇಕು!

ಬಾಸ್: ನಿಂಗೆ ನಾಚಿಕೆಯಾಗಲ್ವ! ನಾನು ಅಡುಗೆ ಮಾಡಿ, ಪಾತ್ರೆ ತೊಳೆದು ನಿನಗಿಂತ ಬೇಗ ಬರಲ್ವ,,,!!!

★★★

ಗುಂಡ: 'ಒಳಗೆ ಬರಬಹುದೇ?'

ಸಂದರ್ಶಕ: 'ವೇಯ್ಟ್ ಪ್ಲೀಸ್.'

ಗುಂಡ: 75 ಕೆ.ಜಿ. ಸಾರ್.

–ಇಂದು, ತಿಪಟೂರು

